
# ಉದ್ಯೋಗ ಪರ್ವ

## ಶ್ರೀ ನಾಗೇಶ ಬಾಬುರಾವ್ ಶೆಟ್ಟಿ ಅವರ

## ಅಭಿನಂದನ ಗ್ರಂಥ



ಸಂಪಾದಕರು

- ಡಾ. ಎಸ್. ಟಿ. ಮೇರವಾಡೆ
- ಡಾ. ಆರ್. ವಿ. ಪಾಟೀಲ

UDYOGA PARVA : Shri Nagesh Shetty Abhinandangranth, Edited by : Dr. S. T. Merwade Dept of Hindi S. B. Arts and K.C.P. Science College, Vijayapur – Dr. R. V. Patil Dept of Kannada, Anjuman Degree College, Vijayapur

ISBN : 978-93-83813-20-9

Publisher : Soumya Prakashan
Vijayapur - 586 103

© Publisher

First Edition : 2016

Copies : 1000

Pages : xxxii + 590 = 622

Book Size : Demy 1/8

Paper Used : 80 G.S.M. Maplitho

ಉದ್ಯೋಗ ಪರ್ವ : ಶ್ರೀ ನಾಗೇಶ ಬಾಬುರಾವ್ ಶೆಟ್ಟಿ ಅವರ ಅಭಿನಂದನ ಗ್ರಂಥ

ಸಂಪಾದಕರು : ಡಾ. ಎಸ್. ಟಿ. ಮೇರವಾಡೆ
ಡಾ. ಆರ್. ವಿ. ಪಾಟೀಲ

ಪ್ರಕಾಶಕರು : ಸೌಮ್ಯ ಪ್ರಕಾಶನ
ವಿಜಯಪುರ – ೫೮೬ ೧೦೩

© ಪ್ರಕಾಶಕರವು

ಮೊದಲ ಮುದ್ರಣ : ೨೦೧೬

ಪ್ರತಿಗಳು : ೧೦೦೦

ಪುಟಗಳು : xxxii + ೫೯೦ = ೬೨೨

ಪುಸ್ತಕದ ಆಕಾರ : ಡೆಮಿ ೧/೮

ಬಳಸಿದ ಕಾಗದ : ೮೦ ಜಿ.ಎಸ್.ಎಂ. ಮ್ಯಾಪಲಿಥೋ

ಮುದ್ರಕರು :

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಗದಗ – 582 101. M. 9448223602
Email : chaitanyaoffset@gmail.com

೧೧. ಕನ್ನಡ ಸಾಹಿತ್ಯ ಪರಂಪರೆ ಮತ್ತು ದಾಸ ಸಾಹಿತ್ಯ ಚಳವಳಿ ೨೬೫
• ಡಾ. ವಿಠ್ಠಲರಾವ್ ಟಿ. ಗಾಯಕ್ವಾಡ್

೧೨. ಕನ್ನಡ ನಾಡು ಮತ್ತು ಡಾ. ರಾಜಕುಮಾರ ೨೮೦
• ಡಾ. ಬಸವರಾಜ ಡೋಣೂರ

೧೩. ತುಳಸಿದಾಸರ ರಾಮಚರಿತ ಮಾನಸ ೨೯೦
• ಡಾ. ಎಸ್. ಟಿ. ಮೇರವಾಡೆ

೧೪. ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ :
ಶೂನ್ಯ ಸಂಪಾದನೆ-ಒಂದು ವಿಚಾರ ೨೯೮
• ಡಾ. ಶ್ರೀಶೈಲ ನಾಗರಾಳ

೧೫. ವೀರಶೈವ ಲಘು ಸಾಹಿತ್ಯ ಪ್ರಕಾರ :
ಮಂತ್ರ ಗೋಪ್ಯ ಸಾಹಿತ್ಯ ವಿವೇಚನೆ ೩೧೭
• ಡಾ. ಆರ್. ವಿ. ಪಾಟೀಲ

೧೬. ಶಾಸನಗಳಲ್ಲಿ ಪಂಚಾಚಾರ್ಯರು ೩೨೯
• ಡಾ. ಎ. ಸಿ. ವಾಲಿ

೧೭. ಪರಮಪೂಜ್ಯ ಶ್ರೀ ಬಂಥನಾಳ ಶಿವಯೋಗಿಗಳು ೩೪೦
• ಪ್ರೊ. ಬಿ. ಬಿ. ಡೆಂಗನವರ

೧೮. ಜಾತ್ರೆ-ಹಬ್ಬ-ಉರುಸು ೩೪೭
• ಡಾ. ಆರ್. ಆಯ್. ಚಪ್ಪರಬಂದ

೧೯. ಕನ್ನಡ ನಾಡಿನ ಹಕ್ಕಿಗಳು ೩೫೬
• ಡಾ. ಟಿ. ಎಂ. ಗೀತಾಂಜಲಿ

೨೦. ಕುರುಬರ ಮೂಲ ಗುರುಪೀಠ : ಶ್ರೀ ಕ್ಷೇತ್ರ ಸರೂರು ೩೮೦
• ಡಾ. ಬಿ. ಜಿ. ಬಿರಾದಾರ

೨೧. ಕೆಲವು ಸಣ್ಣಕತೆಗಳು-ಹಲವು ಟಿಪ್ಪಣಿಗಳು ೩೮೫
• ಡಾ. ಬಸವರಾಜ ಸಬರದ

೨೨. ಪೂರ್ಣಜ್ಞನ ವಚನಗಳಲ್ಲಿ : ಜನಪದರ ಹಾಗೂ
ಸರ್ವಜ್ಞನ ಪ್ರಭಾವ ೩೯೨
• ಡಾ. ಮಹಾಂತೇಶ ದೋಟಿಹಾಳ

೨೩. ಅಷ್ಟಾವರಣ ೪೧೪
• ಡಾ. ಗುರುಲಿಂಗಪ್ಪ ಧಬಾಲೆ

# ತುಳಸಿದಾಸರ ರಾಮಚರಿತ ಮಾನಸ

• ಡಾ. ಎಸ್. ಟಿ. ಮೇರವಾಡೆ

ಹಿಂದಿ ಸಾಹಿತ್ಯದ ಅಶ್ವಿನಿ ದೇವತೆಗಳಂತೆ ಕಂಗೊಳಿಸುವ ತುಳಸಿದಾಸರ ಜೀವನ ಅಂಧಕಾರಮಯವಾಗಿದೆ. ಕಾರಣ ತಮ್ಮ ಇಷ್ಟದೇವನ ಮುಂದೆ ತನ್ನ ವೈಯಕ್ತಿಕ ವಿಚಾರ ಬರೆಯುವುದು ಇಷ್ಟವಿರಲಿಲ್ಲ. ಗೋಸ್ವಾಮಿ ತುಳಸೀದಾಸರ ಜೀವನದ ಬಗ್ಗೆ ಅಂತಃಸಾಕ್ಷಿ ಮತ್ತು ಬಾಹ್ಯ-ಸಾಕ್ಷಿ ಎರಡರಲ್ಲಿಯೂ ಸಿಗುವದು. ತುಳಸೀದಾಸರ ಜನನದ ಕುರಿತು ವಿದ್ವಾಂಸರಲ್ಲಿ ಭಿನ್ನ-ಭಿನ್ನ ಅಭಿಪ್ರಾಯಗಳಿವೆ. ತುಳಸೀದಾಸರ ಶಿಷ್ಯ ಬಾಬಾ ವೇಣಿಮಾಧವದಾಸ ಕೃತ 'ಮೂಲ ಗೋಸಾಯಿ ಚರಿತ'ದಲ್ಲಿರುವಂತೆ ಸನ್ ೧೫೫೪ ಶ್ರಾವಣ ಶುಕ್ಲ ಸಪ್ತಮಿಯಂದು ತುಳಸೀದಾಸರ ಜನ್ಮವಾಗಿದೆ. ಇದನ್ನು ಬಹುತೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಪಂಡಿತ ರಾಮಗುಲಾಬ ದ್ವಿವೇಸಿಯವರು ತುಳಸೀ ಅವರ ಜನ್ಮ ಸನ್ ೧೫೮೯ ಎಂದು ಉಲ್ಲೇಖಿಸಿದ್ದು ಬಹಳಷ್ಟು ಒಪ್ಪಿತವಾಗಿದೆ. ಜನ್ಮಸ್ಥಳ ರಾಜಾಪುರ, ತಂದೆ ಆತ್ಮಾರಾಮ ದುಬೆ, ತಾಯಿ ಹುಲಸೀ, ಧರ್ಮಪತ್ನಿ ರತ್ನಾವಲಿ. ತುಳಸೀದಾಸರ ಜೀವನದ ಬಗ್ಗೆ ಅನೇಕ ದಂತಕತೆಗಳಿವೆ, ಅದರಲ್ಲಿ ಒಂದನ್ನು ಇಲ್ಲಿ ತಿಳಿಸಲಾಗಿದೆ.

ಆ ಯುವಕನಿಗೆ ಆಗತಾನೆ ಮದುವೆಯಾಗಿತ್ತು. ಆತನ ಹೆಂಡತಿ ಬಲು ಚೆಲುವೆ. ಆಕೆಯ ಚೆಲುವು ಆತನಿಗೆ ಹುಚ್ಚು ಹಿಡಿಸಿತ್ತು. ಯಾವಾಗ ನೋಡಿದರೂ ಅವಳ ಹಿಂದೆ ಹಿಂದೆಯೇ ಓಡಾಡುತ್ತಿದ್ದ, ಕ್ಷಣವೂ ಅವಳ ಅಗಲಿಕೆ ಸಹಿಸುತ್ತಿರಲಿಲ್ಲ. ಹೀಗಿರುವಾಗ ಒಮ್ಮೆ ಅವನು ಎಲ್ಲೋ ಹೊರಗಡೆ ಹೋಗಿದ್ದಾಗ ಆಕೆಯ ತವರುಮನೆಯವರು ಬಂದು ಯಾವುದೋ ತುರ್ತುಕಾರ್ಯ ನಿಮಿತ್ತ ಆಕೆಯನ್ನು ತಮ್ಮ ಊರಿಗೆ ಕರೆದುಕೊಂಡು ಹೋದರು. ಯುವಕ ಮನೆಗೆ ಮರಳಿದಾಗ ಹೆಂಡತಿಯಿಲ್ಲದುದನ್ನು ಕಂಡು ಹೌಹಾರಿದ. ಅವಳಿಲ್ಲದೆ ಅವನಿಗೆ ಕ್ಷಣವೊಂದು ಯುಗವಾಗಿ ಕಾಣತೊಡಗಿತು. ಕೂಡಲೇ ಆಕೆಯ ತವರುಮನೆಯತ್ತ ಪ್ರಯಾಣ ಬೆಳಸಿದ. ಅಂದು ಅಮಾವಾಸ್ಯೆಯಿರಬೇಕು. ಆ ಗಾಢಾಂಧಕಾರದಲ್ಲಿ ಮೋಹವಿಹ್ವಲನಾದ ಆ ಯುವಕ ನೆರೆ ಬಂದ ನದಿಯನ್ನೂ ಲೆಕ್ಕಿಸದೆ ಹುಚ್ಚು ಸಾಹಸದಿಂದ ಅದನ್ನು ದಾಟಿ ಮಾವನ ಮನೆ ಮುಟ್ಟಿದ. ಆಗ ನಟ್ಟಿರುಳು, ಆತ

# ತುಳಸಿದಾಸರ ರಾಮಚರಿತ ಮಾನಸ

• ಡಾ. ಎಸ್. ಟಿ. ಮೇರವಾಡೆ

ಹಿಂದಿ ಸಾಹಿತ್ಯದ ಅಶ್ವಿನಿ ದೇವತೆಗಳಂತೆ ಕಂಗೊಳಿಸುವ ತುಳಸಿದಾಸರ ಜೀವನ ಅಂಧಕಾರಮಯವಾಗಿದೆ. ಕಾರಣ ತಮ್ಮ ಇಷ್ಟದೇವನ ಮುಂದೆ ತನ್ನ ವೈಯಕ್ತಿಕ ವಿಚಾರ ಬರೆಯುವುದು ಇಷ್ಟವಿರಲಿಲ್ಲ. ಗೋಸ್ವಾಮಿ ತುಳಸೀದಾಸರ ಜೀವನದ ಬಗ್ಗೆ ಅಂತಃಸಾಕ್ಷಿ ಮತ್ತು ಬಾಹ್ಯ-ಸಾಕ್ಷಿ ಎರಡರಲ್ಲಿಯೂ ಸಿಗುವದು. ತುಳಸೀದಾಸರ ಜನನದ ಕುರಿತು ವಿದ್ವಾಂಸರಲ್ಲಿ ಭಿನ್ನ-ಭಿನ್ನ ಅಭಿಪ್ರಾಯಗಳಿವೆ. ತುಳಸೀದಾಸರ ಶಿಷ್ಯ ಬಾಬಾ ವೇಣಿಮಾಧವದಾಸ ಕೃತ 'ಮೂಲ ಗೋಸಾಯಿ ಚರಿತ'ದಲ್ಲಿರುವಂತೆ ಸನ್ ೧೫೫೪ ಶ್ರಾವಣ ಶುಕ್ಲ ಸಪ್ತಮಿಯಂದು ತುಳಸೀದಾಸರ ಜನ್ಮವಾಗಿದೆ. ಇದನ್ನು ಬಹುತೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಪಂಡಿತ ರಾಮಗುಲಾಬ ದ್ವಿವೇಸಿಯವರು ತುಳಸೀ ಅವರ ಜನ್ಮ ಸನ್ ೧೫೮೯ ಎಂದು ಉಲ್ಲೇಖಿಸಿದ್ದು ಬಹಳಷ್ಟು ಒಪ್ಪಿತವಾಗಿದೆ. ಜನ್ಮಸ್ಥಳ ರಾಜಾಪುರ, ತಂದೆ ಆತ್ಮಾರಾಮ ದುಬೆ, ತಾಯಿ ಹುಲಸೀ, ಧರ್ಮಪತ್ನಿ ರತ್ನಾವಲಿ. ತುಳಸೀದಾಸರ ಜೀವನದ ಬಗ್ಗೆ ಅನೇಕ ದಂತಕತೆಗಳಿವೆ, ಅದರಲ್ಲಿ ಒಂದನ್ನು ಇಲ್ಲಿ ತಿಳಿಸಲಾಗಿದೆ.

ಆ ಯುವಕನಿಗೆ ಆಗತಾನೆ ಮದುವೆಯಾಗಿತ್ತು. ಆತನ ಹೆಂಡತಿ ಬಲು ಚೆಲುವೆ. ಆಕೆಯ ಚೆಲವು ಆತನಿಗೆ ಹುಚ್ಚು ಹಿಡಿಸಿತ್ತು. ಯಾವಾಗ ನೋಡಿದರೂ ಅವಳ ಹಿಂದೆ ಹಿಂದೆಯೇ ಓಡಾಡುತ್ತಿದ್ದ, ಕ್ಷಣವೂ ಅವಳ ಅಗಲಿಕೆ ಸಹಿಸುತ್ತಿರಲಿಲ್ಲ. ಹೀಗಿರುವಾಗ ಒಮ್ಮೆ ಅವನು ಎಲ್ಲೋ ಹೊರಗಡೆ ಹೋಗಿದ್ದಾಗ ಆಕೆಯ ತವರುಮನೆಯವರು ಬಂದು ಯಾವುದೋ ತುರ್ತುಕಾರ್ಯ ನಿಮಿತ್ತ ಆಕೆಯನ್ನು ತಮ್ಮ ಊರಿಗೆ ಕರೆದುಕೊಂಡು ಹೋದರು. ಯುವಕ ಮನೆಗೆ ಮರಳಿದಾಗ ಹೆಂಡತಿಯಿಲ್ಲದುದನ್ನು ಕಂಡು ಹೌಹಾರಿದ. ಅವಳಿಲ್ಲದೆ ಅವನಿಗೆ ಕ್ಷಣವೊಂದು ಯುಗವಾಗಿ ಕಾಣತೊಡಗಿತು. ಕೂಡಲೇ ಆಕೆಯ ತವರುಮನೆಯತ್ತ ಪ್ರಯಾಣ ಬೆಳಸಿದ. ಅಂದು ಅಮಾವಾಸ್ಯೆಯಿರಬೇಕು. ಆ ಗಾಢಾಂಧಕಾರದಲ್ಲಿ ಮೋಹವಿಹ್ವಲನಾದ ಆ ಯುವಕ ನೆರೆ ಬಂದ ನದಿಯನ್ನೂ ಲೆಕ್ಕಿಸದೆ ಹುಚ್ಚು ಸಾಹಸದಿಂದ ಅದನ್ನು ದಾಟಿ ಮಾವನ ಮನೆ ಮುಟ್ಟಿದ. ಆಗ ನಟ್ಟಿರುಳು, ಆತ

ಅಲ್ಲಿಗೆ ಹೋದಾಗ ಮನೆ ಬಾಗಿಲು ಮುಚ್ಚಿತ್ತು. ಎಷ್ಟು ಬಡಿದರೂ ಬಾಗಿಲು ತೆರೆಯದುದನ್ನು ಕಂಡು ಸೂರಿಗೆ ತೂಗುತ್ತಿದ್ದ ಹಗ್ಗವನ್ನು ಹಿಡಿದು ಮಾಳಿಗೆಯೇರಿ ಒಳಕ್ಕಿಳಿದ ಎಚ್ಚರಗೊಂಡ ಹೆಂಡತಿ ದೀಪ ತಂದು ನೋಡಿದರೆ ಆತ ಹಿಡಿದುಕೊಂಡು ಹತ್ತಿದ ಹಗ್ಗ ಹಗ್ಗವಾಗಿರದೆ ಹಾವಾಗಿತ್ತು. ಪುಣ್ಯಕ್ಕೆ ಅದಕ್ಕೂ ನಿದ್ದೆಯ ಮಂಪರಿರಬೇಕು. ಇಲ್ಲವಾಗಿದ್ದರೆ ಆ ಯುವಕನ ಕಥೆ ಆಗಲೇ ಮುಗಿದುಹೋಗಿರುತ್ತಿತ್ತು. ತನ್ನ ಗಂಡನ ಈ ಹುಚ್ಚು ಸಾಹಸವನ್ನು ಕಂಡು ಅವಳಿಗೆ ದಿಗ್ಭ್ರಾಂತಿಯಾಗಿರಬೇಕು. ಅವಳು ಅವನ ಸಾಹಸವನ್ನು ಮೆಚ್ಚದೆ ಛೀಮಾರಿಹಾಕಿದಳು. "ನಾಥ, ಎಲುಬಿನ ಹಂದರ, ಚಕ್ಕಳದ ಮಂದಿರವಾದ ಈ ದೇಹದ ಮೋಹದಲ್ಲಿ ಇಷ್ಟು ದೂರ ಇಂಥ ಆ ವೇಳೆಯಲ್ಲಿ ಇಷ್ಟು ಸಾಹಸದಿಂದ ಬಂದಿರಲ್ಲ! ನಿಮಗೆ ನಾಚಿಕೆಯಾಗುವುದಿಲ್ಲವೆ? ನೋಡಿದವರು ಏನೆಂದಾರು? ಇಂಥ ಪ್ರೀತಿ, ಮೋಹಕ್ಕೆ ಧಿಕ್ಕಾರ! ಇಂಥ ಪ್ರೀತಿಯನ್ನು ಶ್ರೀರಾಮನಲ್ಲಿ ಇಟ್ಟಿದ್ದರೆ ನೀವು ಭವಸಾಗರವನ್ನು ಎಂದೋ ದಾಟಿಬಿಡುತ್ತಿದ್ದಿರಲ್ಲ!" ಎಂದಳು.

ಪತ್ನಿ ತನ್ನ ಸಾಹಸವನ್ನು ಮೆಚ್ಚಿಕೊಳ್ಳುವಳು–ಎಂದುಕೊಂಡಿದ್ದ ಆ ಯುವಕ ಆಕೆಯ ಮಾತು ಕೇಳಿ ಪೆಚ್ಚಾದ. ಅವನ ಹುಚ್ಚು ಬಿಟ್ಟುಹೋಯಿತು. ಅವನ ಮೋಹಜ್ವರ ಜರ್‍ರನೆ ಇಳಿದು ಹೋಯಿತು. ಅವನ 'ಕಾಮವೆಲ್ಲ 'ರಾಮ'ವಾಗಿಬಿಟ್ಟಿತು. ಅವನು ಆ ಸಾಧ್ವಿಗೆ ನಮಿಸಿ ಹೇಳಿದ: "ಸಖಿ ನೀನು ಇಂದು ನನ್ನ ಕಣ್ಣು ತೆರೆಸಿದೆ ನೀನೆ ನನ್ನ ಗುರು. ನಿನ್ನ ಮಾತು ನನಗೆ ಇಗೋ ಹೊರಟೆ!" ಎಂದು ಹೊರಟೆಬಿಟ್ಟ.

ಈ ರೀತಿ ಪತ್ನಿಯ ಛೀಮಾರಿಯಿಂದ ಅವನು ಕಾಮದ ಕೆಸರಿನಿಂದ ಮೇಲೆದ್ದ: ಎಷ್ಟು ಮೇಲೆದ್ದನೆಂದರೆ ಹಿಂದಿಯ ಹಿಮಾಲಯವಾಗಿಬಿಟ್ಟ. ಆತನೇ ಹಿಂದಿಯ ಕವಿಕುಲಗುರು ತುಳಸೀದಾಸ. ಆ ಹಿಮಾಲಯದ ಹೃದಯದೇಶದಲ್ಲಿ 'ಮಾನಸ' ನಿರ್ಮಿತವಾಯಿತು. ಅದೇ ಆತನ ಮೇರುಕೃತಿ 'ರಾಮಚರಿತಮಾನಸ.' ತುಳಸೀದಾಸ ದೀಕ್ಷಾ ಗುರು ಬಾಬಾ ನರಹರಿದಾಸರು. ಅವರು ತಮ್ಮ ಗುರುವಿನ ಬಗ್ಗೆ ರಾಮಚರಿತ ಮಾನಸದಲ್ಲಿ ಅನೇಕ ಸಂದರ್ಭದಲ್ಲಿ ನೆನೆಸಿದ್ದಾರೆ. ದೀಕ್ಷಾಕೊಟ್ಟ ಗುರುವಿನಿಂದಲೇ ತುಳಸೀದಾಸರು ರಾಮ–ಕಥೆಯನ್ನು ಕೇಳಿದ್ದರು. ಹದಿನಾರು ವರ್ಷಗಳ ಕಾಲ ವೇದ, ಪುರಾಣ, ಉಪನಿಷದ್, ರಾಮಾಯಣ ಹಾಗೂ ಭಗವತ್ ಗೀತೆ ಮುಂತಾದ ಗ್ರಂಥಗಳ ಗಂಭೀರ ಅಧ್ಯಯನ ಮಾಡುತ್ತಾ ಅನೇಕ ತೀರ್ಥಸ್ಥಳಗಳ ಯಾತ್ರೆಮಾಡಿ ಕೊನೆಗೆ ಕಾಶೀಯಲ್ಲಿ ಇದ್ದರು.

ನಾಗರಿ ಪ್ರಚಾರಿಣೀ ಸಭಾ ಕಾಶೀಯವರು ತುಳಸೀದಾಸರ ಹನ್ನೆರಡು ಪ್ರಮಾಣಿಕ ಗ್ರಂಥಗಳೆಂದು ತಿಳಿದು ಎಲ್ಲ ಗ್ರಂಥಗಳನ್ನು ಮುದ್ರಿಸಿದ್ದಾರೆ. ಅವುಗಳಲ್ಲಿ 'ರಾಮಚರಿತ ಮಾನಸ' ತುಳಸೀದಾಸರ ಸರ್ವಶ್ರೇಷ್ಠ ಗ್ರಂಥವೆಂದು ಹೇಳಲಾಗಿದೆ.

ರಾಮಚರಿತ ಮಾನಸ; ಹಿಂದಿ ಸಾಹಿತ್ಯದ ಮಹಾಕಾವ್ಯಗಳ ಪರಂಪರೆಯಲ್ಲಿ ತುಳಸೀದಾಸರು ರಚಿಸಿದ ರಾಮಚರಿತ ಮಾನಸ ಒಂದು ಶ್ರೇಷ್ಠ ಮಹಾಕಾವ್ಯವಾಗಿದೆ. ಅದರ ಭವ್ಯತೆ, ಆಳ-ಅಗಲ ಇಣಿಕಿ ನೋಡುವದು ಕಠಿಣ ಕಾರ್ಯ. ರಾಮ ಕಥೆಯನ್ನು ತೆಗೆದುಕೊಂಡು ಸಂಸ್ಕೃತ ಭಾಷೆಯಲ್ಲಿ ಆದಿ ಕವಿ ವಾಲ್ಮೀಕಿಯವರು ತಮ್ಮ ಅಮರ ಕಾವ್ಯ ರಾಮಾಯಣದ ರಚನೆ ಮಾಡಿದ್ದಾರೆ. ಅವರು ಅನೇಕ ಭಾಷೆಯ ಕವಿಗಳಿಗೆ ಆದರ್ಶಪ್ರಾಯರಾಗಿದ್ದರು. ಪ್ರಾಕೃತ, ಅಪಭ್ರಂಶ ಮತ್ತು ಹಿಂದಿ ಮಾತ್ರವಲ್ಲದೇ ಕನ್ನಡ, ಅಸಾಂ, ಗುಜರಾತಿ, ತೆಲಗು ಮತ್ತು ಮಲಯಾಳಂ ಮುಂತಾದ ಎಲ್ಲ ಭಾಷೆಗಳಲ್ಲಿ ರಾಮಾಯಣದ ಕಥೆ ಒಂದಿಲ್ಲ ಒಂದು ರೂಪವಾಗಿ ಕಾವ್ಯದಲ್ಲಿ ಬಂದಿದೆ. ತುಳಸೀದಾಸರು ರಾಮ-ಕಥೆಯನ್ನು ಆಧಾರವಾಗಿ ಇರಿಸಿಕೊಂಡು 'ರಾಮಚರಿತ ಮಾನಸ'ದ ರಚನೆ ಮಾಡಿದ್ದಾರೆ.

ವಾಸ್ತವವಾಗಿ ತುಳಸೀದಾಸರು ರಾಮ ಕಾವ್ಯದ ಸಾಮ್ರಾಟರಿದ್ದಾರೆ. ರಾಮನನ್ನು ಸಮಾಜದ ಮಧ್ಯದಲ್ಲಿ ಇಟ್ಟು ಮಾನವ-ಜೀವನದ ಆದರ್ಶಗಳನ್ನು ವಿಶ್ವವ್ಯಾಪೀ ಹರಡಿದ್ದಾರೆ. ಮಾನಸದಲ್ಲಿ ತುಳಸೀದಾಸರು ರಾಮ ಜೀವನದ ಸರ್ವಾಂಗೀಣ ಚಿತ್ರವನ್ನು ಚಿತ್ರಿಸಿದ್ದಾರೆ. ಸಂಕಲನಾತ್ಮಕ ಹಾಗೂ ಕಲಾತ್ಮಕವಾಗಿ ಎರಡು ಪ್ರಕಾರದ ಮಹಾಕಾವ್ಯಗಳ ವಿಶಿಷ್ಟ ಸಮನ್ವಯವನ್ನು ರಾಮಚರಿತ ಮಾನಸದಲ್ಲಿ ಕಾಣಬಹುದು. ಇದರಲ್ಲಿ ತನ್ನ ಯುಗದ ಸಂಪೂರ್ಣ ವಿಶೇಷತೆಗಳೊಂದಿಗೆ ವ್ಯಕ್ತಿಗತ ಜೀವನವು ಅಭಿವ್ಯಕ್ತಗೊಂಡಿದೆ. ಅಲ್ಲಿಯೇ ಕಾವ್ಯ-ಕಲೆಯ ಉತ್ಕೃಷ್ಟ ರೂಪ ಸ್ಪಷ್ಟವಾಗುತ್ತದೆ. ರಾಮಚರಿತಮಾನಸ ಎಲ್ಲ ಧರ್ಮ ಗ್ರಂಥಗಳಿಗಿಂತಲೂ ಅತ್ಯಂತ ಲೋಕಪ್ರೀಯತೆ ಗಳಿಸಿದೆ. ಪ್ರಪಂಚದ ಯಾವುದೇ ಗ್ರಂಥವು ಮಾನಸದಷ್ಟು ಲೋಕಪ್ರೀಯತೆ ಪಡೆದಿರುವುದಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯ.

**ಕಥಾವಸ್ತು :**

ರಾಮಚರಿತ ಮಾನಸದಲ್ಲಿ ರಾಮ-ಕಥೆಯ ಪರಿಪೂರ್ಣವಾದ ವರ್ಣನೆ ಇದೆ. ಮಾನಸದ ಕಥೆಯ ಸ್ಥೂಲ ರೂಪರೇಖೆ ವಾಲ್ಮೀಕಿ ರಾಮಾಯಣದ ಮೇಲೆ ಆಧಾರವಾಗಿದೆ. ಆದರೆ ತುಳಸೀದಾಸರು ಸಂದರ್ಭಾನುಗುಣವಾಗಿ ಕಲಾತ್ಮಕತೆ ಹಾಗೂ ಮೌಲಿಕತೆಯನ್ನು ನಿರ್ಮಿಸಿದ್ದಾರೆ. ನಾನಾ ಪುರಾಣಗಳು, ಮೌಲಿಕ ಪರಿವರ್ತನೆ, ಹೊಸ ಕಲ್ಪನೆಗಳು, ಯುಗ ಪರಿವರ್ತನೆಯ ಇಚ್ಛೆ, ಇವೆಲ್ಲವುಗಳಿಂದ ಕಾವ್ಯದ ಪ್ರತಿಭೆ ಹೆಚ್ಚಿದೆ. ರಾಮನನ್ನು ಈಶ್ವರನ ಅವತಾರದಲ್ಲಿ ಚಿತ್ರಿಸಿ ಜೊತೆಗೆ ಸಮಗ್ರ ಸಮಾಜದ ಸರ್ವಕಲ್ಯಾಣವನ್ನು ಕುರಿತು ತುಳಸೀದಾಸರು ಬರೆದಿದ್ದಾರೆ. ಕವಿಗಳು ರಾಮಚರಿತ ಮಾನಸ ಕಾವ್ಯಕ್ಕೆ ಒಂದು ಸ್ವತಂತ್ರ ಅಸ್ತಿತ್ವ ತಂದು ಕೊಟ್ಟಿದ್ದಾರೆ. ಇದರೊಂದಿಗೆ ರಾಮ-ಕಥೆ ಸಮನ್ವಯತೆ, ರಾಷ್ಟ್ರೀಯತೆ ಮತ್ತು ಅಮರತ್ವ ನೀಡಿದ್ದಾರೆ.

ತುಳಸೀದಾಸರು ಕಥೆಯ ವಿಕಾಸದ ಕಡೆಗೆ ಹೆಚ್ಚು ಅವಕಾಶ ಕೊಟ್ಟಿದ್ದಾರೆ. ವಿವಿಧ ಘಟನೆಗಳು ಮತ್ತು ಉಪಕಥೆಗಳ ಸುಂದರ ಸಮನ್ವಯವಾಗುವದರಿಂದ ಕಾವ್ಯದಲ್ಲಿ ಒಂದು ಕಥೆಯಲ್ಲಿ ಪ್ರಬಂಧದ ಪ್ರೌಢಿಮೆ ವಿಶಿಷ್ಟವಾಗಿ ಮೂಡಿಬಂದಿದೆ. ರೀತಿ ರಸಪೂರ್ಣತೆಯಿಂದ ಅದರಲ್ಲಿ ವಿಭಿನ್ನ ಮಾರ್ಮಿಕ ಸ್ಥಳಗಳ ನಿರೂಪಣೆಯು ಹೃದಯ ಸ್ಪರ್ಶಿಯಾಗಿದೆ. ಅಸಂಖ್ಯ ಸ್ಮರಣೀಯ ಪ್ರಸಂಗಗಳಲ್ಲಿ ಜನಕ-ವನದಲ್ಲಿ, ರಾಮ-ಸೀತೆಯನ್ನು ಕಂಡಿದ್ದು, ರಾಮ ವನವಾಸಕ್ಕೆ ಹೋಗುವದು, ಸೀತಾ ಅಪಹರಣದ ಸಮಯದಲ್ಲಿ ರಾಮನ ದುಃಖ, ರಾಮ-ರಾವಣ, ವಿಭೀಷಣ ಯುದ್ಧ ಪ್ರಸಂಗ ಮುಂತಾದ ಸಂದರ್ಭಗಳಲ್ಲಿ ತುಳಸೀದಾಸರ ವಿಶೇಷ ಪ್ರತಿಭೆಯ ಲೇಖನಿಯು ಚಮತ್ಕಾರದೊಂದಿಗೆ ಅನಾವರಣಗೊಂಡಿದೆ. ವಾಲ್ಮೀಕಿ ರಾಮಾಯಣದಲ್ಲಿ ಸಣ್ಣ-ಸಣ್ಣ ಪ್ರಸಂಗಗಳೊಂದಿಗೆ ಮುಖ್ಯ ಕಥೆಯಲ್ಲಿ ತೀವ್ರತೆ ಇರುವುದಿಲ್ಲ, ಆದರೆ ಮಾನಸದಲ್ಲಿ ಕಥೆಯ ಅತಿಯಾಗಿದೆ. ಅದರ ಪ್ರತ್ಯೇಕ ಘಟನೆಗಳು ಒಂದೂಂದಾಗಿ ಸಾಗಿದೆ. ಆದರೆ ಆ ಸಾಲುಗಳು ಎಲ್ಲಿಯೂ ಮುರಿದಂತೆ ಕಾಣುವುದಿಲ್ಲ.

**ವಸ್ತುವರ್ಣನೆ :**

ರಾಮಚರಿತ ಮಾನಸದ ಪರಿಧಿ ಅತ್ಯಂತ ವಿಶಾಲವಾಗಿರುವದರಿಂದ ಅದರಲ್ಲಿ ಸೃಷ್ಟಿಯ ವಿಭಿನ್ನ ರೂಪಗಳು ಹಾಗೂ ಪ್ರಕೃತಿಯ ವಿಭಿನ್ನ ದೃಶ್ಯಗಳ ವರ್ಣನೆ ಸಹಜವಾಗಿ ಮೂಡಿ ಬಂದಿವೆ. ನಗರ-ಪರ್ವತ, ವನ-ಉಪವನ, ನದಿ-ಸಾಗರ, ಪಶು-ಪಕ್ಷಿ, ವಾನರ-ರಾಕ್ಷಸ, ವಿವಾಹ, ಸ್ವಯಂವರ, ಯುದ್ಧ, ಮೃತ್ಯು, ರಾಜದರ್ಬಾರ, ಋಷಿ-ಮುನಿಗಳ ಆಶ್ರಮ, ವಿವಿಧ ಋತುಗಳು, ಸ್ನಾನ-ಸಂಧ್ಯಾವಂದನೆ, ಪೂಜೆ, ಬೇಟೆ, ಯಜ್ಞ-ಹವನ, ನೀತಿ, ಧರ್ಮ, ದರ್ಶನ ಮುಂತಾದ ವಿಭಿನ್ನ ದೃಶ್ಯಗಳ ವರ್ಣನೆ ಸಹಜವಾಗಿ ಮೂಡಿ ಬಂದಿವೆ. ಮಾನವ ಜೀವನ ಮತ್ತು ವಿಶ್ವಚೇತನದ ಅನೇಕ ಅಂಗಗಳು ಯಾವದೇ ಅಂಶ ತುಳಸೀದಾಸರ ಲೇಖನಿಯಿಂದ ದೂರವಾಗಿಲ್ಲ. ಎಲ್ಲದರ ವರ್ಣನೆ ತುಂಬಾ ಅಚ್ಚುಕಟ್ಟಾಗಿ ನಿರೂಪಿತವಾಗಿದೆ. ಪ್ರತೀಕಾತ್ಮಕ ಮತ್ತು ರೂಪಾತ್ಮಕವಾಗಿ ಜನ-ಸಾಧಾರಣ ಹಾಗೂ ಗ್ರಾಮೀಣ ಜೀವನದೊಂದಿಗೆ ಸಂಬಂಧಿಸಿದ ಮಾತುಗಳ ವರ್ಣನೆ ಅತ್ಯಂತ ಪರಿಣಾಮಕಾರಿಯಾಗಿದೆ. ಕೃಷಿಕ ತನ್ನ ಭೂಮಿ ಹೇಗೆ ಊಳುತ್ತಾನೆ? ತನ್ನ ಜೀವನ ಹೇಗೆ ಸಾಗಿಸುತ್ತಾನೆ? ವನವಾಸಿ, ಆದಿವಾಸಿ ಮತ್ತು ಪ್ರಾಣಿಗಳು ಹೇಗೆ ಬದಕುತ್ತವೆ? ಸಮಾಜದ ರೀತಿ-ನೀತಿಗಳು ಹೇಗಿವೆ ? ಸ್ತ್ರೀ-ಪುರುಷ, ಸಜ್ಜನ- ದುರ್ಜನ, ರಾಜಾ-ಪ್ರಜೆ, ಸೌಮ್ಯ-ಅಸಭ್ಯ, ಗೃಹಸ್ಥ-ವನವಾಸೀ, ಬ್ರಹ್ಮಚಾರಿ ಮತ್ತು ಸನ್ಯಾಸಿ, ವೈರಾಗ್ಯ ಮತ್ತು ವಿಲಾಸ, ಸರಸ ಮತ್ತು ವಿರಸ ಮುಂತಾದವುಗಳಲ್ಲಿಯ ದ್ವಂದ್ವ, ಇವೆಲವುಗಳನ್ನು ಕವಿಗಳು ಸೂಕ್ಷ್ಮ ದೃಷ್ಟಿಯಿಂದ ನೋಡಿ ವರ್ಣಿಸಿದ್ದಾರೆ. ಎಲ್ಲ ಪುರಾಣಗಳು, ಧರ್ಮಶಾಸ್ತ್ರಗಳು, ಮತ್ತು ನೀತಿ

ಶಾಸ್ತ್ರಗಳ ಎಲ್ಲ ವಿಷಯಗಳು ಮಾನಸದ ಹೃದಯದಲ್ಲಿ ಕುಳಿತಿವೆ. ಸಮಕಾಲೀನ ಪರಿಸ್ಥಿತಿಗಳು ತಮ್ಮ ವಾಸ್ತವಿಕ ರೂಪದಲ್ಲಿ ಇವೆ. ವರ್ಣನೆಯ ವಿಶೇಷತೆ ಏನೆಂದರೆ-ಎಲ್ಲಿಯೂ ಅನಾವಶ್ಯಕ ವಿವರಣೆ, ಎಣಿಕೆ-ಪ್ರವೃತ್ತಿ ಅಥವಾ ಪಾಂಡಿತ್ಯ ಪ್ರದರ್ಶನ ಕಂಡುಬರುವುದಿಲ್ಲ. ಒಂದು ವಸ್ತುವಿನ ವರ್ಣನೆ ಒಮ್ಮೆಯಾದರೆ ಇನ್ನೊಮ್ಮೆ ಅದರ ಪ್ರಸಂಗ ಬಂದರೂ ಸಹ ಕೇವಲ ಸಾಂಕೇತಿಕವಾಗಿ ಮುನ್ನಡಿಸಿದ್ದಾರೆ. ರಾಸೋ ಹಾಗೂ ಪದ್ಮಾವತ ಕಾವ್ಯಗಳಲ್ಲಿ ಪುನರಾವರ್ತಿ ಕಾಣುತ್ತೇವೆ. ಜೀವದಿಂದ ಬ್ರಹ್ಮನವರೆಗೂ ಶೂದ್ರತಮ ಮತ್ತು ಮಹತ್ವ ಪದಾರ್ಥಗಳ ವಾಸ್ತವಿಕ ಚಿತ್ರಣ ಮಾನಸದಲ್ಲಿ ಕಂಡುಬರುತ್ತದೆ. ಮನಸ್ಸು ಎಂಬ ಮಾನಸರೋವರದ ಅಕ್ಕ-ಪಕ್ಕ ಅನೇಕ ಸುಂದರ ದೃಶ್ಯಗಳು ಆಧ್ಯಾತ್ಮ ಹಾಗೂ ದರ್ಶನದ ಅಂಶಗಳಿಂದ ಕೂಡಿವೆ.

**ಚರಿತ್ರ ವಿಧಾನ :**

ರಾಮಚರಿತ ಮಾನಸ ಒಂದು ಅದ್ಭುತ ಮಹಾಕಾವ್ಯವಿದೆ. ಇದರಲ್ಲಿ ಅಸಂಖ್ಯ ಪಾತ್ರಗಳು ಹೊಸ ಬಗೆಯಾಗಿ ಹಾಗೂ ಸುಂದರವಾಗಿ ಹೊರಬಂದಿವೆ. ಅವುಗಳು ವ್ಯಕ್ತಿಗಳಾಗಿದ್ದರೂ ಸಮಾಜ ಅಥವಾ ವರ್ಗದ ಪ್ರತಿನಿಧಿಗಳಾಗಿವೆ. ಸಮಾಜ ಹಾಗೂ ವರ್ಗದಿಂದ ಬಂದಿದ್ದರೂ ತಮ್ಮ ವೈಯಕ್ತಿಕ ವಿಶೇಷತೆಯಿಂದ ಅಮರತ್ವ ಪಡೆದಿವೆ. ಪ್ರಸ್ತುತ ಕಾವ್ಯದಲ್ಲಿ ತುಳಸೀದಾಸರು ತಮ್ಮ ಪಾತ್ರಗಳ ಚರಿತ್ರೆಯಲ್ಲಿ ಪ್ರಕೃತಿಯ ಸೂಕ್ಷ್ಮ ಅಧ್ಯಯನದ ಪರಿಚಯ ನೀಡಿದ್ದಾರೆ. ವಿವಿಧ ಪಾತ್ರಗಳ ಚರಿತ್ರಾತ್ಮಕ ವಿಶೇಷತೆಯ ಅಭಿವ್ಯಕ್ತಿ ಮನೋವೈಜ್ಞಾನಿಕ ರೀತಿಯಲ್ಲಿಯೂ ಆಗಿದೆ. ತುಳಸೀದಾಸರ ರಾಮ ಲೋಕನಾಯಕ ಮತ್ತು ದೈವತ್ವದ ಜೊತೆಗೆ ಮನುಷ್ಯತ್ವದ ಪ್ರತೀಕವಾಗಿದ್ದಾರೆ. ಅವರ ಚರಿತ್ರೆ ಪ್ರತಿಯೊಂದು ಅಂಶಗಳಲ್ಲಿ ಆದರ್ಶವಾಗಿವೆ. ಅವರ ಉದಾರತೆ ಹಾಗೂ ಭವ್ಯತೆ-ಭರತನ ತ್ಯಾಗಭಾವನೆ ಮತ್ತು ನಿಷ್ಠೆ, ಲಕ್ಷ್ಮಣನ ನಿರ್ಭಯತೆ, ಹನುಮಂತನ ಸೇವಾನಿಷ್ಠತೆ, ಸೀತೆಯ ಸತಿತ್ವ ಭಾವನೆ, ಕೌಶಲ್ಯೆಯ ಮಮತೆ ಮುಂತಾದವುಗಳು ಚಾರಿತ್ರಿಕ ವಿಶೇಷತೆಗಳ ಜೊತೆಗೆ ಕೈಕೇಯಿಯ ಕುಟೀಲತೆ, ರಾವಣನ ದುಷ್ಟತೆ ಸ್ವಾಭಾವಿಕವಾಗಿ ಸ್ಪಷ್ಟವಾಗಿವೆ. ಅಂಗದ, ವಿಭೀಷಣ, ಸುಗ್ರೀವ, ದಶರಥ ಇತ್ಯಾದಿ ಆದರ್ಶ ಮತ್ತು ಅದ್ಭುತ ಪಾತ್ರಗಳಾಗಿವೆ. ರಾಮಚರಿತ ಮಾನಸದಲ್ಲಿ ಎಲ್ಲ ವರ್ಗದ, ಎಲ್ಲ ಸ್ಥಿತಿಗಳ ಪಾತ್ರಗಳು ಸಿಗುತ್ತವೆ. ತಂದೆ, ಮಗ, ಸಹೋದರ, ಮಿತ್ರ, ಸ್ವಾಮೀ, ಸೇವಕ, ಪತಿ, ಪತ್ನಿ ತಾಯಿ, ಮಗಳು, ಸೊಸೆ, ದಾಸಿ, ರಾಣಿ, ಶಿಕ್ಷಿತ, ಅಸಂಸ್ಕೃತ ಸಾಕ್ಷಾತ್ಕಾರ ಓದುಗನ ಮುಂದೆ ಬರುತ್ತದೆ. ಇದರೊಂದಿಗೆ ಭಾರತೀಯ ಸಮಾಜದ ಆದರ್ಶದ ರೂಪ ಚಿತ್ರಿಸಲಾಗಿದೆ. ಸಮಾಜದ ಸುವ್ಯವಸ್ಥೆಯ ಬಗ್ಗೆ ತುಳಸೀದಾಸರು ಅತಿ ಜಾಗರೂಕರಾಗಿದ್ದಾರೆ. ವಾಸ್ತವಿಕವಾಗಿ ಕಾವ್ಯದ ಎಲ್ಲ ಪಾತ್ರಗಳು ಅವಿಸ್ಮರಣೀಯವಾಗಿವೆ. ಯಾಕೆಂದರೆ ತುಳಸೀದಾಸರ ಚರಿತ್ರ ಚಿತ್ರಣದ ಮೂರೂ

ಪಕ್ಷಗಳಲ್ಲಿ ಶಾರೀರಿಕ ವ್ಯಕ್ತಿತ್ವದ ಸಂಕೇತ, ಬೌದ್ಧಿಕ ಗುಣಗಳ ವಿವೇಚನೆ ಹಾಗೂ ಅತಿ ವಿಶಾಲ ಗುಣಗಳ ಚಿತ್ರಣ ಈ ಮೂರು ಪಕ್ಷಗಳಲ್ಲಿ ಅತ್ಯಂತ ಯಶಸ್ಸು ಕಂಡಿದ್ದಾರೆ.

**ರಸ-ಯೋಜನೆ :**

ರಾಮಚರಿತ ಮಾನಸ ಕಾವ್ಯದಲ್ಲಿ ಭಾವನೆಗಳ ಆಳ ಅಲೆಅಲೆಯಾಗಿ ತೇಲುವದನ್ನು ಕಾಣಬಹುದು. ವಿವಿಧ ಪರಿಸ್ಥಿತಿಯಲ್ಲಿ ಉತ್ಪನ್ನ ಆಗುವ ಭಾವನೆಗಳು ಮತ್ತು ಮನಸ್ಸಿನ ವೇಗದ ಚಿತ್ರಣ ಅತ್ಯಂತ ಅದ್ಭುತವಾಗಿದೆ. ಪ್ರೇಮ, ವಿರಹ, ಉತ್ಸಾಹ, ಕ್ರೋಧ ಆಶ್ಚರ್ಯ ಮತ್ತು ಕರುಣೆಯೊಂದಿಗೆ ಭಕ್ತಿಯ ಭಾವನೆಯ ಅಭಿವ್ಯಕ್ತಿ ಪ್ರಸ್ತುತ ಕಾವ್ಯದಲ್ಲಿ ಯಥಾವತ್ತಾಗಿದೆ. ಅಲ್ಲಲ್ಲಿ ಹಾಸ್ಯದ ಚಿತ್ರಣವು ಚಿತ್ರಿತಗೊಂಡಿದೆ. ರಾಮ-ಸೀತಾ ಅವರ ಪ್ರಥಮ ಮಿಲನದಿಂದ ವನವಾಸಕ್ಕೆ ಹೋಗುವ ಪೂರ್ವದಲ್ಲಿಯವರೆಗೆ ಸಂಯೋಗ ಮತ್ತು ಸೀತಾ ಅಪಹರಣ ನಂತರ ವಿಯೋಗ ಶೃಂಗಾರದ ಮಾರ್ಮಿಕ ಚಿತ್ರಣವಾಗಿದೆ. ರಾಮ-ರಾವಣ ಯುದ್ಧದ ನಂತರ ಅನೇಕ ಯುದ್ಧದ ಪ್ರಸಂಗಗಳಲ್ಲಿಯೂ ವೀರ, ರೌದ್ರ, ಭಯಾನಕ ಮತ್ತು ಬೀಭತ್ಸ ರಸದ ಚಿತ್ರಣವಾಗಿದೆ. ರಾಮನ ವನವಾಸದ ನಂತರ ದಶರಥನ ಸಾವು, ಲಕ್ಷ್ಮಣನ ಶೌರ್ಯ, ರಾವಣನ ಮರಣದ ನಂತರ ಮಂಡೋದರಿಯ ದುಃಖ ಮುಂತಾದ ಪ್ರಸಂಗಗಳಲ್ಲಿ ಕರುಣಾ ರಸದ ನಿರೂಪಣೇ ಹೃದಯಸ್ಪರ್ಶಿಯಾಗಿದೆ. ನಾರದರ ಮೋಹ ಪ್ರಸಂಗ ಮತ್ತು ಶಿವ ವಿವಾಹ ಪ್ರಸಂಗ ಹಾಸ್ಯದ ಒಳ್ಳೆಯ ಮಾದರಿಗಳಾಗಿವೆ. ಒಟ್ಟಿನಲ್ಲಿ ಹೇಳುವದಾದರೆ ಪೂರ್ಣವಾಗಿ ಈ ಕಾವ್ಯದಲ್ಲಿ ಶಾಂತರಸವಿದೆ. ಸೌಮ್ಯ ಹಾಗೂ ಭಕ್ತಿಪೂರ್ಣ ಭಾವನೆ ಸಂಪೂರ್ಣ ಕಥೆಯನ್ನು ಆವರಿಸಿಕೊಂಡಿದೆ.

**ಭಾಷೆ- ಶೈಲಿ :**

ಪ್ರಸ್ತುತ ಕಾವ್ಯದಲ್ಲಿ ತುಳಸೀದಾಸರು ಪರಿಷ್ಕೃತ ಅವಧಿ ಭಾಷೆಯನ್ನು ಬಳಿಸಿದ್ದಾರೆ. ಇದಕ್ಕಿಂತಲೂ ಮೊದಲು ಪ್ರೇಮ-ಮಾರ್ಗಿಯ ಕವಿಗಳು ಅವಧಿ ಭಾಷೆಯಲ್ಲಿ ಬರೆದಿದ್ದರು. ಆದರೆ ತುಳಸೀದಾಸರು ಈ ಭಾಷೆಗೆ ಶುದ್ಧ ಸಾಹಿತ್ಯಿಕ ರೂಪ ನೀಡಿದರು. ಅವರು ಸಂಸ್ಕೃತದ ಕೋಮಲವಾದ ಶಬ್ದಗಳಿಂದ ಅವಧಿ ಭಾಷೆಯ ಸೌಂದರ್ಯವನ್ನು ಹೆಚ್ಚಿಸಿದ್ದಾರೆ. ತುಳಸೀದಾಸರ ಭಾಷೆ ಸೌಂದರ್ಯತೆ ಹಾಗೂ ಸರಳತೆಯಿಂದ ಕೂಡಿದೆ. ಮಾನಸದ ಭಾಷೆ ಪರಿಷ್ಕೃತ, ಪ್ರವಾಹದೊಂದಿಗೆ ಮತ್ತು ಆಡಂಬರ ರಹಿತವಾಗಿದೆ. ಅದರ ಸಹಜತೆ ಹಾಗೂ ವ್ಯವಹಾರ ಕುಶಲತೆಯಿಂದ ಪ್ರಸ್ತುತ ಕಾವ್ಯದ ಅನೇಕ ಗಾದೆ ಹಾಗೂ ನಾಣ್ಣುಡಿಗಳು ಇಂದಿನ ಆಡುಭಾಷೆಯಲ್ಲಿ ಬಳಸಲ್ಪಟ್ಟಿವೆ.

ಮಾನಸ ಕಾವ್ಯದಲ್ಲಿ ದೋಹಾ, ಚೌಪಾಯಿಯ ಮಸನವೀ ಶೈಲಿಯ ಪ್ರಯೋಗವಾಗಿದೆ. ಮಧ್ಯದಲ್ಲಿ ಹರಿಗೀತಿಕಾ, ತೋಮರ, ತ್ರಿಭಂಗಿ, ಇಂದ್ರವಜ್ರಾ,

ಭುಜಂಗ-ಪ್ರಯಾತ, ಮಾಲಿನೀ, ವಸಂತತಿಲಕ ಇತರೆ ಛಂದಗಳ ಪ್ರಯೋಗ ಯಥಾವತ್ತಾಗಿ ಮೂಡಿಬಂದಿದೆ. ಕವಿಗಳು ಶಬ್ದ, ಸಂಗೀತ, ಲಯ ಮತ್ತು ಭಾವಾಭಿವ್ಯಕ್ತಿಗೆ ಮಹತ್ವ ಕೊಟ್ಟಿದ್ದಾರೆ. ಇಲ್ಲಿ ಅಲಂಕಾರಗಳ ಬಳಕೆ ಸಹ ಸುಂದರ ಹಾಗೂ ಸ್ವಾಭಾವಿಕವಾಗಿವೆ. ಚಮತ್ಕಾರ ಪ್ರದರ್ಶಿಸಿದ ಕಲ್ಪನೆ ಸಹ ಇರುವುದಿಲ್ಲ. ಉಪಮಾ, ಉತ್ಪ್ರೇಕ್ಷೆ, ರೂಪಕ, ದೃಷ್ಟಾಂತ ರೂಪಕ, ಅತಿಶಯೋಕ್ತಿ, ಮುಂತಾದವುಗಳ ಉಪಯೋಗ ಅತ್ಯಧಿಕವಾಗಿದೆ. ಆದರೆ ರೂಪಕದಂತಹ ಸಹಜ, ಅಧಿಕತೆ ಹಾಗೂ ಪೂರ್ಣತೆ ಈ ಕಾವ್ಯದಲ್ಲಿ ಸಿಗುತ್ತದೆ. ಈ ರೀತಿಯಾಗಿ ರಾಮಚರಿತ ಮಾನಸದಲ್ಲಿ ತುಳಸೀದಾಸರ ಕಾವ್ಯ ಪ್ರತಿಭೆಯ ಪರಮೋಜ್ವಲ ಪ್ರಕಾಶ ನೋಡಲು ಸಿಗುತ್ತದೆ. ಈ ಕಾವ್ಯದಲ್ಲಿ ಆದರ್ಶ ಸಮಾಜದ ನಿರ್ಮಾಣ ಮಾಡಲಾಗಿದ್ದು, ಈ ಆದರ್ಶ ಸಮಾಜ ಯಾವದೇ ವರ್ಗದ್ದಾಗದೇ ಸಮಗ್ರ ವಿಶ್ವ ಕಲ್ಯಾಣಕ್ಕಾಗಿಯೇ ಬರೆಯಲ್ಪಟ್ಟಿದೆ. ಇದರಲ್ಲಿ ನಾವು ನಮ್ಮ ಜೀವನದ ಪ್ರತಿಬಿಂಬ ನೋಡಬಹುದು. ವಿವಿಧ ಘಟನೆಗಳ, ವರ್ಣನೆಗಳ, ಭಾವಗಳ ಸುಂದರ ಸಮನ್ವಯ ತೋರಿಸುತ್ತಾ ಕವಿಗಳು ಈ ಮಹಾಕಾವ್ಯದಲ್ಲಿ ಕಾವ್ಯ-ಕಲೆಯ ಸರ್ವಾಂಗೀಣ ವಿಕಾಸ ಮಾಡಿದ್ದಾರೆ. ಭಿಕ್ಷುಕನಿಂದ ರಾಜನವರೆಗೆ, ಮೂರ್ಖನಿಂದ ವಿದ್ವಾನವರಗೆ, ಬಾಲಕನಿಂದ ವೃದ್ಧನವರೆಗೆ ಎಲ್ಲರ ಹೃದಯದಲ್ಲಿ ಈ ಕಾವ್ಯ ಸ್ಥಾನ ಪಡೆದುಕೊಂಡಿದೆ. ಇದರಲ್ಲಿ ಭಾರತೀಯ ಸಮಾಜದ ಹೃದಯವಂತಿಕೆ, ಭಾರತೀಯರ ಸುಮಧುರ ಸ್ವರ, ಹಾಗೂ ಭಾರತೀಯ ಸಂಸ್ಕೃತಿ ಸ್ಪಷ್ಟವಾಗಿ ಗೋಚರಿಸುತ್ತದೆ.

ತುಳಸೀದಾಸರು ನಿರೂಪಿಸಿರುವ ರಾಮತ್ವ ಹಾಗೂ ರಾವಣತ್ವದ ಕಲ್ಪನೆಯ ಮೂಲದಲ್ಲಿ ಭಾರತದ ಆ ಕಾಲದ ರಾಜಕೀಯ ದುರವಸ್ಥೆ ಅಡಗಿತ್ತು. ತುಳಸೀದಾಸರು ಅದನ್ನು ಪ್ರಚ್ಛನ್ನರೂಪದಲ್ಲಿ ಹೇಳಿದರು. ಒಬ್ಬ ಯುಗ ಪ್ರವರ್ತಕ ಕವಿ ಹೀಗೆ ಮಾಡುವುದು ಅನಿವಾರ್ಯ. ತುಳಸೀದಾಸರು ತಮ್ಮ ಕಾಲದ ಭಾರತದ ರಾಜಕೀಯ ಪರಿಸ್ಥಿತಿಯತ್ತ ನಮ್ಮ ಗಮನ ಸೆಳೆಯುವುದೇ ಅಲ್ಲದೆ, ಆ ಪರಿಸ್ಥಿತಿಯನ್ನು ಸುಧಾರಿಸಲು ಮಾಡಬೇಕಾದ ರಾಜಧರ್ಮ ಯಾವುದು ಎನ್ನುವ ಭವ್ಯಚಿತ್ರವನ್ನು ನೀಡಿದ್ದಾರೆ. ಅವರು ಚಿತ್ರಿಸಿರುವ ಕಲಿಕಾಲದ ವರ್ಣನೆಯಲ್ಲಿ ರಾವಣತ್ವ ಬಿಂಬಿಸಿದ್ದರೆ, ರಾಮರಾಜ್ಯದ ವರ್ಣನೆಯಲ್ಲಿ ಅವರ ಆದರ್ಶ ಸಮಾಜದ ಕಲ್ಪನೆಯಿದೆ, ಹೊಂಗನಸಿದೆ. ಈ ಭೂಮಿಯ ಮೇಲೆ ದಬ್ಬಾಳಿಕೆ ನಡೆಸುವ ನಾಯಕರು ಎಲ್ಲಿಯವರೆಗೆ ಇರುತ್ತಾರೋ ಅಲ್ಲಿಯವರೆಗೆ ಮಾನವ ಕಲ್ಯಾಣಕ್ಕಾಗಿ ಅಂಥವರ ದಮನ ಅತ್ಯಗತ್ಯ. ಅಲ್ಲಿಯವರೆಗೆ ತುಳಸೀದಾಸರ ರಾಜಕೀಯ ಆದರ್ಶ ಪ್ರಸ್ತುತ ಹಾಗೂ ಪ್ರಾಸಂಗಿಕವಾಗಿ ಉಳಿಯುತ್ತದೆ.

ರಾಜಕೀಯವನ್ನೇನೋ ಅವರು ಸಾಂಕೇತಿಕವಾಗಿ ಚಿತ್ರಿಸಿದರು. ಕಥೆಯ ಮೂಲಕ ತಮ್ಮ ವ್ಯಥೆಯನ್ನು ತೋಡಿಕೊಂಡರು. ಅದೇನಾದರೂ ಅಗಲಿ, ಅವರ ಮೂಲಧ್ಯೇಯ ಸಮಾಜದ ನೆಲಗಟ್ಟನ್ನು ಭದ್ರಪಡಿಸುವುದು; ಶಿಥಿಲವಾಗುತ್ತಿದ್ದ ಹಿಂದೂ ಸಮಾಜವ್ಯವಸ್ಥೆಯನ್ನು ಸುವ್ಯವಸ್ಥಿತಗೊಳಿಸುವುದು ಅವರ ಮೂಲ

ಆಶಯವಾಗಿದೆ. ಅವರು ಯಾವುದೇ ಒಂದು ವಿಶಿಷ್ಟ ಪಂಥ, ಸಂಪ್ರದಾಯ ಅಥವಾ ಮತವಿಶೇಷವನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳದೆ ನಮ್ಮ ಸನಾತನ ಪರಂಪರೆಯನ್ನು ಉಜ್ವಲೋಜ್ವಲವಾಗಿ ಮುಂದೆ ತಂದಿಟ್ಟರು. ಅವರದು ತುಂಬ ದೂರದೃಷ್ಟಿ. ವೈದಿಕ ಯುಗದಲ್ಲಿ ಆರ್ಯಸಂಸ್ಕೃತಿಯ ಸೂರ್ಯ ದಿಗ್ದಿಗಂತಗಳಲ್ಲಿ ತೊಳಗಿ ಬೆಳಗುತ್ತಿದ್ದ. ಅದಕ್ಕೆ ಕಾರಣ ಆರ್ಯಜನಾಂಗ ವರ್ಣಾಶ್ರಮ ಧರ್ಮವನ್ನು ಕಟ್ಟುನಿಟ್ಟಾಗಿ ಆಚರಿಸುತ್ತಿತ್ತು. ಸ್ವಧರ್ಮಾಚರಣೆ ಪ್ರತಿಯೊಬ್ಬನ ಪಾವನ ಕರ್ತವ್ಯವಾಗಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಈ ರೀತಿ ನಾಲ್ಕು ವರ್ಣಗಳಲ್ಲಿ ಸಮಾಜ ವಿಂಗಡನೆ ನಡೆದಿತ್ತು. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ–ಈ ನಾಲ್ಕು ಆಶ್ರಮಗಳ ಪಾಲನೆ ಜೀವನ ಸರ್ವಾಂಗೀಣ ವಿಕಾಸವಾಗುವಂತೆ ನಡೆಯುತ್ತಿತ್ತು. ಎಲ್ಲಿಯೂ ವರ್ಣ ಇಲ್ಲವೆ ವರ್ಗವೈಷಮ್ಯ ಇರುತ್ತಿರಲಿಲ್ಲ, ಧರ್ಮ, ಜ್ಞಾನ–ವಿಜ್ಞಾನ ಹಾಗೂ ಸ್ವಾರ್ಥ–ಪರಮಾರ್ಥಗಳ ಸಿದ್ಧಿಗಾಗಿ ಜೀವನದ ಈ ಮಾರ್ಗ ಅತ್ಯಂತ ಉಪಯೋಗಿಯಾಗಿತ್ತು. ತುಳಸೀದಾಸರು ವೇದಶಾಸ್ತ್ರಗಳ ಅಧ್ಯಯನದಿಂದ ಭಾರತದ ಈ ಹಿರಿಮೆಗರಿಮೆ ಪುನರುಜ್ಜೀವನಗೊಳಿಸಬಯಸಿದರು. ಅವರು ಭಾರತೀಯ ಸಂಸ್ಕೃತಿಯ ಪ್ರತೀಕವಾದ ರಾಮನನ್ನು ತಮ್ಮ ಕಾವ್ಯ ನಾಯಕನನ್ನಾಗಿ ಆರಿಸಿಕೊಂಡರು. ತುಳಸೀದಾಸರು ಹೊಸ ಸಂಪ್ರದಾಯಗಳನ್ನು, ಪಂಥಗಳನ್ನು ಸ್ಥಾಪಿಸುವುದರ ವಿರೋಧಿಯಾಗಿದ್ದರು. ಯಾವುದೇ ಹೊಸ ಪಂಥ ಹತ್ತರೊಂದಿಗೆ ಹನ್ನೊಂದಾಗುವುದೇ ಹೊರತು ಇನ್ನೊಂದೇನನ್ನೂ ಸಾಧಿಸದು ಎಂಬುದನ್ನು ಅವರ ಒಳಗಣ್ಣು ಕಂಡುಕೊಂಡಿತ್ತು. ಅವರ ದೃಷ್ಟಿಯಲ್ಲಿ ಅದು ಅಹಂಕಾರಿ ಕಾರ್ಯ. ಅವರು ಮನಸ್ಸು ಮಾಡಿದ್ದರೆ ಒಂದು ಬಹುದೊಡ್ಡ ಸಂಪ್ರದಾಯವನ್ನು ಸ್ಥಾಪಿಸಬಹುದಾಗಿತ್ತು. ಆದರೆ ಅದು ಅವರ ಗುರಿಯಲ್ಲ. ಅವರ ದೃಷ್ಟಿ ತಾವು ಚಿತ್ರಿಸಿದ ಪಾತ್ರಗಳೆಲ್ಲ ಸಾತ್ವಿಕ ಭಾವನೆಯಿಂದ ತುಂಬಿ ತುಳುಕುತ್ತಿರಲಿ, ಅವುಗಳಲ್ಲಿ ದುರ್ಭಾವನೆ ಅಥವಾ ತಾಮಸೀವೃತ್ತಿ ಇಲ್ಲದಿರಲಿ ಎಂಬುದರತ್ತ. ರಾವಣನನ್ನು ಬಿಟ್ಟರೆ ಅವರ ಯಾವ ಪಾತ್ರವೂ ಸದ್ಭಾವನೆಯಿಂದ ಹೊರಗುಳಿದಿಲ್ಲ.

ರಾವಣನ ವಿದ್ಯೆ, ಬುದ್ಧಿ, ವೈಭವಗಳನ್ನು ಅವರು ಮನಃಪೂರ್ವಕವಾಗಿ ಹೊಗಳಿದರು; ಮತ್ತು ಅವುಗಳ ಮಹತ್ವವನ್ನು ಮನಬಿಚ್ಚಿ ಒಪ್ಪಿಕೊಂಡರು. ಆದರೆ ಆ ವಿದ್ಯೆ, ಬುದ್ಧಿ, ಬಲದ ದುರಪಯೋಗವನ್ನು ಅವರು ಖಂಡಿಸಿದರು. ಆ ದುರುಪಯೋಗವೇ ರಾವಣನನ್ನು ರಾಕ್ಷಸನನ್ನಾಗಿ ಮಾಡಿತು.

■■